ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಗುಂಡ್ಲುಪೇಟೆ

**ಸಿ.ಸಿ. ಸಂಖ್ಯೆ:** 520/2025

ಪ್ರಾಸಾ – 11

ಚಾಸಾ – **24**

**ಸಾಕ್ಷಿಯು ದಿಃ 20.02.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

| | | |
|---|---|---|
| ಹೆಸರು | : | ಹೆಚ್.ಎನ್ ಬಾಲಕೃಷ್ಣ |
| ತಂದೆಯ ಹೆಸರು | : | ನಂಜುಂಡಪ್ಪ |
| ವಯಸ್ಸು | : | 45 ವರ್ಷ |
| ವೃತ್ತಿ | : | ಪಿಐ |
| ವಾಸಸ್ಥಳ | : | ಮಂಗಳೂರು |

**ಮುಖ್ಯ ವಿಚಾರಣೆ :ಮಾನ್ಯ ಎಪಿಪಿಯವರಿಂದ ವಿಸಿ ಮೂಲಕ**

(ಸಾಕ್ಷಿಯು ನೀಡಿದ ವಿವರಣೆಯಂತೆ ಚೆನ್ನಪ್ಪ ಹೆಚ್.ಸಿ 335, ಬಚಪೆ ಪೊಲೀಸ್ ಠಾಣೆ ಮಂಗಳೂರು ರವರು ಕೋ ಆರ್ಡಿನೇಟರ್ ಆಗಿರುತ್ತಾರೆ. ಈ ನ್ಯಾಯಾಲಯದಲ್ಲಿ ಶ್ರೀ ಮಹದೇಸ್ವಾಮಿ ವಿಸಿ ಗೆ ಕೋ ಆರ್ಡಿನೇಟರ್ ಆಗಿರುತ್ತಾರೆ.)

ದಿಃ 2017 ರಿಂದ 2019 ರವರೆಗೆ ಗುಂಡ್ಲುಪೇಟೆ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

02. ದಿಃ 28.06.2019 ರಂದು ಚಾಸಾ 23 ರವರಿಂದ ಈ ಪ್ರಕರಣದ ಕಡತವನ್ನು ಪಡೆದು ಪರಿಶೀಲಿಸಿರುತ್ತೇನೆ. ಅದೇ ದಿನ ಮೃತ ಅನುಷಾ ಅಲಿಯಾಸ್ ಸೋನು ರವರ ಶವ ಪಂಚನಾಮೆಯನ್ನು ಮೈಸೂರು ಮೆಡಿಕಲ್ ಕಾಲೇಜ್ ನ ಶವಾಗಾರದಲ್ಲಿ ಚಾಸಾ 11 ರಿಂದ 13 ರವರ ಸಮಕ್ಷಮ ಮಧ್ಯಾಹ್ನ 12.00 ರಿಂದ 2.00 ಗಂಟೆಯವರೆಗೆ ಚಾಸಾ 22 ರವರ ಮೂಲಕ ಬರವಣಿಗೆ ಮಾಡಿಸಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 10 ಎಂದು, ಸಾಕ್ಷಿಯ ಸಹಿಯನ್ನು ನಿಪಿ 10(ಎ) ಎಂದು ಗುರ್ತಿಸಲಾಯಿತು ಮತ್ತು ಆ ಸಮಯದಲ್ಲಿ ಫೋಟೋ ತೆಗೆಸಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 11 ಎಂದು ಗುರ್ತಿಸಲಾಯಿತು. ನಂತರ ಅದೇ ದಿನ ಸಂಜೆ 5.00 ರಿಂದ 5.45 ರವರೆಗೆ ಕೃತ್ಯ ನಡೆದ ಸ್ಥಳವಾದ ಗುಂಡ್ಲುಪೇಟೆಯ ಸುರಭಿ ಹೋಟೆಲ್ ನ ಮುಂಭಾಗ ಚಾಸಾ 1 ರವರು ತೋರಿಸಿದ ಸ್ಥಳದಲ್ಲಿ ಚಾಸಾ 9 ಮತ್ತು 10 ರವರ ಸಮಕ್ಷಮ ಚಾಸಾ 22 ರವರ ಮೂಲಕ ನಿಪಿ 5 ರಂತೆ ಬರವಣಿಗೆ ಮಾಡಿಸಿರುತ್ತೇನೆ ಎಂದು ಸಾಕ್ಷಿ ಅದರಲ್ಲಿ ತಮ್ಮ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 5(ಸಿ) ಎಂದು ಗುರ್ತಿಸಲಾಯಿತು. ಪಂಚನಾಮೆ ಸಮಯದಲ್ಲಿ ಕೆಎ-02-ಎಜಿ-5823 ಇಚರ್ ಗೂಡ್ಸ್ ವಾಹನ ಮತ್ತು ಕಎ-10-ಎ-3419 ಟಾಟಾ ಎಸ್ ಜೇಪ್ ಗೂಡ್ಸ್ ವಾಹನವನ್ನು ಮುಂದಿನ ಕ್ರಮಕ್ಕಾಗಿ ವಶಕ್ಕೆ ಪಡೆದುಕೊಂಡಿರುತ್ತೇನೆ. ನಿಪಿ 2 ಪಂಚನಾಮೆ ಸಮಯದಲ್ಲಿ ಕಚ್ಚಾ ನಕ್ಷೆ ತಯಾರಿಸಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 12 ಎಂದು, ಸಾಕ್ಷಿಯ ಸಹಿಯನ್ನು ನಿಪಿ 12(ಎ) ಎಂದು ಗುರ್ತಿಸಲಾಯಿತು. ಅಮಾನತ್ತು ಪಡಿಸಿಕೊಂಡ ವಾಹನಗಳನ್ನು ಠಾಣಾ ಮಾಲುಪಟ್ಟಿಯಲ್ಲಿ ಅಳವಡಿಸಿಕೊಂಡಿರುತ್ತೇನೆ.

3. ದಿಃ 29.06.2019 ರಂದು ಇಚರ್ ವಾಹನದ ಮಾಲೀಕರಾದ ಆರೋಪಿಯ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ ಮತ್ತು ಅವರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿ ಗೈರು ಹಾಜರಿದ್ದು ಗುರ್ತಿಸುವಿಕೆಯ ವಿಚಾರದಲ್ಲಿ ತಕರಾರು ಇಲ್ಲ ಎಂದು ನುಡಿದ ಕಾರಣ ವಿನಾಯಿತಿ ಅರ್ಜಿಯನ್ನು ಪುರಸ್ಕರಿಸಲಾಯಿತು. ಆರೋಪಿಯನ್ನು ಸೂಕ್ತ ಬಾಂಡ್ ಪಡದು ಬಿಡುಗಡೆ ಮಾಡಿರುತ್ತೇನೆ. ಅದೇ ದಿನ ಆರೋಪಿಯ ಜಿಪಿಎ ದಾರಕರಾದ ಚಾಸಾ 15

ರವರಿಂದ ನಷ್ಟ ಭರ್ತಿ ಬಾಂಡ್ ಪಡೆದು, ವಾಹನ ತಪಾಸಣೆ ಮಾಡಿಸಿ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷಿಯು ನಷ್ಟ ಭರ್ತಿ ಬಾಂಡ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 13, ಸಾಕ್ಷಿಯ ಸಹಿಯನ್ನು ನಿಪಿ 13(ಎ) ಎಂದು ಗುರ್ತಿಸಲಾಯಿತು. ಅದೇ ದಿನ ಚಾಸಾ 15 ರವರಿಗೆ ಮೋಟರ್ ವಾಹನಗಳ ಕಾಯ್ದೆ ಕಲಂ 133 ಅಡಿಯಲ್ಲಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ ಎಂದು ಸಾಕ್ಷಿಯು ನೋಟೀಸ್ ಮತ್ತು ಉತ್ತರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 14 ಮತ್ತು 15 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 14(ಎ) ಮತ್ತು 15(ಎ) ಎಂದು ಗುರ್ತಿಸಲಾಯಿತು. ಅದೇ ದಿನ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 1 ರವರ ಮರು ಹೇಳಿಕೆ ದಾಖಲಿಸಿರುತ್ತೇನೆ. ಚಾಸಾ 21 ರವರ ಹೇಳಿಕೆ ದಾಖಲಿಸಿರುತ್ತೇನೆ. ದಿಃ 30.06.2019 ರಂದು ಚಾಸಾ 5 ಮತ್ತು 7 ರವರ ಹೇಳಿಕೆ ದಾಖಲಿಸಿರುತ್ತೇನೆ. ದಿಃ 04.07.2019 ರಂದು ಚಾಸಾ 16 ರವರಿಂದ ನಷ್ಟ ಭರ್ತಿ ಬಾಂಡ್ ಪಡೆದು ಟಾಟಾ ಎಎಸ್ ಜೀಪ್ ಗೂಡ್ಸ್ ವಾಹನವನ್ನು ವಾಹನ ತಪಾಸಣೆ ಮಾಡಿಸಿ ವಾಹನವನ್ನು ಬಿಡುಗಡೆ ಮಾಡಿರುತ್ತೇನೆ ಎಂದು ಸಾಕ್ಷಿಯು ನಷ್ಟ ಭರ್ತಿ ಬಾಂಡ್ ನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 16, ಸಾಕ್ಷಿಯ ಸಹಿಯನ್ನು ನಿಪಿ 16(ಎ) ಎಂದು ಗುರ್ತಿಸಲಾಯಿತು. ಅದೇ ದಿನ ಚಾಸಾ 16 ರವರಿಗೆ ಮೋಟರ್ ವಾಹನಗಳ ಕಾಯ್ದೆ ಕಲಂ 133 ಅಡಿಯಲ್ಲಿ ನೋಟೀಸ್ ನೀಡಿ ಉತ್ತರ ಪಡೆದಿರುತ್ತೇನೆ ಎಂದು ಸಾಕ್ಷಿಯು ನೋಟೀಸ್ ಮತ್ತು ಉತ್ತರವನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 17 ಮತ್ತು 18 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 17(ಎ) ಮತ್ತು 18(ಎ) ಎಂದು ಗುರ್ತಿಸಲಾಯಿತು.

4. ದಿಃ 14.07.2019 ರಂದು ಚಾಸಾ 2 ರವರ ಹೇಳಿಕೆ ದಾಖಲಿಸಿರುತ್ತೇನೆ. ದಿಃ 16.07.2019 ರಂದು ಚಾಸಾ 3 ಮತ್ತು 4 ರವರ ಹೇಳಿಕೆ ದಾಖಲಿಸಿರುತ್ತೇನೆ. ದಿಃ 04.07.2019 ರಂದು ಚಾಸಾ 20 ರವರಿಂದ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ಅಡಿಯಲ್ಲಿ ವರದಿ ಪಡೆದಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು 19, ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು ಗುರ್ತಿಸಲಾಯಿತು. ನಂತರ ದಿಃ

20.07.2019 ರಂದು ಮೃತ ಅನುಷಾ ಅಲಿಯಾಸ್ ಸೋನು ರವರ ಶವ ಪರೀಕ್ಷಾ ವರದಿಯನ್ನು ಮೈಸೂರು ಮೆಡಿಕಲ್ ಕಾಲೇಜ್ ನಿಂದ ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ 20(ಎ) ಎಂದು ಗುರ್ತಿಸಲಾಯಿತು. ದಿಃ 04.07.2019 ರಂದು ಚಾಮರಾಜನಗರದ ಆರ್.ಟಿ.ಓ ರವರಿಂದ ವಾಹನ ತಪಾಸಣಾ ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 21 ಎಂದು, ಸಾಕ್ಷಿಯ ಸಹಿಯನ್ನು ನಿಪಿ 21(ಎ) ಎಂದು ಗುರ್ತಿಸಲಾಯಿತು. ದಿಃ 4.10.2019 ರಂದು ಚಾಸಾ 2 ರಿಂದ 7 ರವರ ಗಾಯದ ಪ್ರಮಾಣ ಪತ್ರಗಳನ್ನು ಸ್ವೀಕರಿಸಿರುತ್ತೇನ ಎಂದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 22 ರಿಂದ 27 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ 22(ಎ) ಯಿಂದ 27(ಎ) ಎಂದು ಗುರ್ತಿಸಲಾಯಿತು. ಚಾಸಾ 9 ಮತ್ತು 10 ರವರ ಹೇಳಿಕೆ ದಾಖಲಿಸಿರುತ್ತೇನೆ. ತನಿಖೆ ಪೂರ್ಣಗೊಂಡಿದ್ದು ಆರೋಪಿಯ ವಿರುದ್ಧ ಆರೋಪ ಸಾಬಿತಾದ್ದರಿಂದ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು :- ಆರೋಪಿ ಪರ ವಕೀಲರಿಂದ**

ನಾನು ಕೃತ್ಯ ಸ್ಥಳಕ್ಕೆ ಭೇಟಿ ನೀಡಿಲ್ಲ ಮತ್ತು ಪಂಚನಾಮೆ ಕ್ರಮ ಜರುಗಿಸಿಲ್ಲ ಹಾಗೂ ಯಾವುದೇ ವಾಹನಗಳನ್ನು ವಶಪಡಿಸಿಕೊಂಡ್ಲಿ ಮತ್ತು ಪಂಚನಾಮೆ ಸಾಕ್ಷಿಗಳ ಸಹಿ ಪಡೆದಿಲ್ಲ ಎಂದರೆ ಸರಿಯಲ್ಲ. ಕೃತ್ಯ ಸ್ಥಳವು ಸುರಭಿ ಹೋಟೆಲ್ ಮುಂಭಾಗ ಇರುವುದರಿಂದ ಅಲ್ಲಿ ಜನಸಂದಣಿ ಇರುತ್ತದೆ ಎಂದರೆ ಸರಿ. ಚಾಸಾ 22 ರವರು ನಿಪಿ 5 ಪಂಚನಾಮೆ ಬರೆದಿದ್ದಾರೆ ಎಂಬುವುದರ ಕುರಿತಾಗಿ ಅದರಲ್ಲಿ ನಮೂದಿಸಿಲ್ಲ ಎಂದರೆ ಸರಿ. ಚಾಸಾ 22 ರವರು ನಿಪಿ 5 ಪಂಚನಾಮೆಗೆ ನನ್ನ ಬರಹ ಎಂದು ಸಹಿ ಮಾಡಲು ತೊಂದರೆ ಇರಲಿಲ್ಲ ಎಂದರೆ ಸರಿ. ಆ ದಿನ ಚಾಸಾ 22 ರವರು ಆ ದಿನ ಸ್ಥಳಕ್ಕೆ ಬಂದಿಲ್ಲ ಮತ್ತು ಪಂಚನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಸಾಕ್ಷಿಗಳನ್ನು ನಾನೇ ಮೌಖಿಕವಾಗಿ ಹೇಳಿ ಕರೆಸಿರುತ್ತೇನೆ. ಸ್ಥಳಪಂಚನಾಮೆಯನ್ನು ಮತ್ತು ನಕ್ಷೆಯನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಕಚ್ಚಾನಕ್ಷೆಯು ವಸ್ತು ಸ್ಥಿತಿಗೆ ಅನುಗುಣವಾಗಿಲ್ಲ ಎಂದರೆ ಸರಿಯಲ್ಲ. ಚಾಸಾ 1 ರವರ ಮರು

ಹೇಳಿಕೆ ಮತ್ತು ಯಾವುದೇ ಸಾಕ್ಷಿದಾರರ ಹೇಳಿಕೆ ಪಡೆದಿಲ್ಲ ಹಾಗೂ ಗಾಯದ ಪ್ರಮಾಣ ಪತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿಯ ತಪ್ಪಿನಿಂದ ಅಪಘಾತವಾಗದೇ ಇದ್ದರೂ ಸಹ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದೂರುದಾರರ ವಾಹನವೇ ಆರೋಪಿಯ ವಾಹನಕ್ಕೆ ಡಿಕ್ಕಿಪಡಿಸಿದೆ ಎಂದರೆ ಸರಿಯಲ್ಲ. ಚಾಸಾ 1 ರವರಿಗೆ ಅನುಕೂಲವಾಗಲಿ ಎಂದು ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ **https://meet.google.com/nqh-qhmn-gnb** ವಿಸಿ ಮೂಲಕ ನಡೆದ ವಿಚಾರಣೆಯನ್ನು ಸಮಯ 4.30 ರಿಂದ 4.50 ರವರೆಗೆ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಾಕ್ಷಿದಾರರ ಸಹಿ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ

ಕೋ ಆರ್ಡಿನೇಟರ್ ಸಹಿ

1.

2.